154

# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ : 1439
2. ಸದಸ್ಯರ ಹೆಸರು : ಶ್ರೀ ಸಿ.ಎನ್. ಮಂಜೇಗೌಡ
3. ಉತ್ತರಿಸುವ ದಿನಾಂಕ : 20.03.2025
4. ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಗಳು

| ಪ್ರಶ್ನೆ | ಉತ್ತರ |
|---|---|
| ಅ) ಕರ್ನಾಟಕ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ದಿನಗೂಲಿ ನೌಕರರಿಗೆ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಕನಿಷ್ಠ ಕಾಲಿಕ ವೇತನವನ್ನು ದಿನಾಂಕ:01.08.2018 ರಿಂದ ಜಾರಿಗೆ ಬರುವಂತೆ ನೀಡಲು ಆದೇಶಿಸಲಾಗಿದೆಯೇ; | ಹೌದು.<br>ಕರ್ನಾಟಕ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ದಿನಗೂಲಿ ನೌಕರರಿಗೆ 2018ರ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಕನಿಷ್ಠ ಕಾಲಿಕ ವೇತನವನ್ನು ದಿನಾಂಕ:01.08.2018 ರಿಂದ ಜಾರಿಗೆ ಬರುವಂತೆ ನೀಡಲು ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 22 ಸೇಸ್ಥಾಅ 2018, ದಿನಾಂಕ:15.11.2018ರಲ್ಲಿ ಆದೇಶಿಸಲಾಗಿದೆ. |
| ಆ) ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆರವರು ತಮ್ಮ ಪತ್ರ ಸಂಖ್ಯೆ: ಎಚಿಡಿ 58 ಎಫ್‌ಐಎಂ 2024 ದಿನಾಂಕ: 07.12.2024ರಲ್ಲಿ ದಿನಾಂಕ: 01.08.2018 ರಿಂದ ಜಾರಿಗೆ ಬರುವಂತೆ ಕಾಲಿಕ ದ್ವಿತೀಯ ವೇತನ ಶ್ರೇಣಿಯನ್ನು ನೀಡಲು ಆದೇಶಿಸಿರುವುದು ಕ್ರಮ ಬದ್ಧವೇ; | ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆರವರು ತಮ್ಮ ಪತ್ರ ಸಂಖ್ಯೆ: ಎಂಐಡಿ 58 ಎಫ್‌ಐಎಂ 2024 ದಿನಾಂಕ: 07.12.2024ರಲ್ಲಿ ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 22 ಸೇಸ್ಥಾಅ 2018, ದಿನಾಂಕ:15.11.2018ರಲ್ಲಿ ಸೂಚಿಸಿರುವಂತೆ, ದಿನಾಂಕ:01.08.2018ರಿಂದ ಜಾರಿಗೆ ಬರುವಂತೆ ಇಲಾಖೆಯ ಅರ್ಹ ಸಿಬ್ಬಂದಿಗಳಿಗೆ ಅವರುಗಳನ್ನು ಸೇವೆಯಲ್ಲಿ ಮುಂದುವರಿಸಿದ ಹುದ್ದೆಯ ಕಾಲಿಕ ವೇತನ ಶ್ರೇಣಿಯ ಕನಿಷ್ಠ ವೇತನ ನಿಗದಿಗೊಳಿಸಲು ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ಆದೇಶಿಸಲಾಗಿದೆ. ಕಾಲಿಕ ದ್ವಿತೀಯ ವೇತನ ಶ್ರೇಣಿಯನ್ನು ನೀಡಲು ಆದೇಶಿಸಿರುವುದಿಲ್ಲ. |
| ಇ) ಹಾಗಿದ್ದಲ್ಲಿ ಕಾಲಿಕ ದ್ವಿತೀಯ ವೇತನಶ್ರೇಣಿಯನ್ನು ಎಲ್ಲಾ ಇಲಾಖೆಯ ಕ್ಷೇಮಾಭಿವೃದ್ಧಿ ದಿನಗೂಲಿ ನೌಕರರಿಗೆ ನೀಡಲು ಕ್ರಮ ಕೈಗೊಳ್ಳಲಾಗುವುದೇ? | ಉದ್ಭವಿಸುವುದಿಲ್ಲ. |

**ಸಂಖ್ಯೆ: ಸಿಆಸುಇ 18 ಸೇಸ್ಥಾಅ 2025**

(ಸಿದ್ದರಾಮಯ್ಯ)
**ಮುಖ್ಯಮಂತ್ರಿ**